**OS.No.**167/2022

**ಪಿ ಡಬ್ಲ್ಯೂ೩1**

**ದಿಃ 07-12-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎಂ ಟಿ ಎಸ್ 1 ರಿಂದ 6 ನೇ ಪ್ರತಿವಾದಿಗಳ ಪರ ವಕೀಲರಿಂದ**

ನನ್ನ ತಂದೆ ಗಂಗಾಧರಪ್ಪ ಮರಣ ಹೊಂದಿ ಸುಮಾರು 50 ವರ್ಷಕ್ಕೂ ಹೆಚ್ಚಿಗೆ ಆಗಿದೆ. ನನ್ನ ದೊಡ್ಡಪ್ಪ ನಿಂಗಪ್ಪರವರು ಸುಮಾರು 25 ವರ್ಷ ಆಗಿದೆ. ನಿಂಗಪ್ಪರವರ ಮೊದಲ ಮಗ ಓಂಕಾರಪ್ಪರವರು ಸುಮಾರು 15 ವರ್ಷಗಳ ಹಿಂದೆ ಮರಣ ಹೊಂದಿದ್ದಾರೆ. ಸದರಿ ಓಂಕಾರಪ್ಪರವರಿಗೆ ಒಬ್ಬ ಮಗಳು ಮತ್ತು ಇಬ್ಬರು ಗಂಡು ಮಕ್ಕಳು ಇದ್ದಾರೆ. ಓಂಕಾರಪ್ಪರವರ ವಾರಸುದಾರರು ಸುಮಾರು 40 ವರ್ಷಗಳಿಂದ ಬೆಳ್ಳಿಗನೂರು ಗ್ರಾಮದಲ್ಲಿ ವಾಸವಿದ್ದಾರೆ. ನನ್ನ ಸಹೋದರರಾದ ಕುಬೇರಪ್ಪ ಮತ್ತು ಉಮೇಶಪ್ಪರವರು ಮರಣ ಹೊಂದಿ ಸುಮಾರು 20 ವರ್ಷ ಆಗಿದೆ. ವಾದ ಪತ್ರದಲ್ಲಿ ನಾವು ಕುಬೇರಪ್ಪ, ಉಮೇಶಪ್ಪ ಮತ್ತು ಓಂಕಾರಪ್ಪರವರ ವಂಶಸ್ಥರ ವಿವರ ನೀಡಿಲ್ಲ ಎಂದರೆ ಸರಿ. ನನ್ನ ತಂದೆ ಗಂಗಾಧರಪ್ಪ ವಾಸವಿದ್ದ ಮನೆ ಈಗ ಬಿದ್ದು ಹೋಗಿದೆ. ಸದರಿ ಮನೆ ಸುಮಾರು 40 ವರ್ಷಗಳ ಹಿಂದೆ ಬಿದ್ದು ಹೋಗಿತ್ತು. ಹಾಗೆ ಬಿದ್ದು ಹೋದ ಮನೆಯಲ್ಲಿ 3 ಮನೆಯನ್ನು ನಿರ್ಮಿಸಿದ್ದೇವೆ. ಸದರಿ ಮನೆಗಳಲ್ಲಿ ನಾಲ್ಕು ಮತ್ತು ಐದನೇ ವಾದಿಗಳು ಮತ್ತು 1 ನೇ ಪ್ರತಿವಾದಿ ವಾಸವಿದ್ದಾರೆ. ಹಾಗೆ ಸುಮಾರು 40-50 ವರ್ಷಗಳಿಂದ ಪ್ರತ್ಯೇಕವಾಗಿ ವಾಸಿಸುತ್ತಾ ಮನೆತನದ ವ್ಯವಹಾರಗಳನ್ನು ಬೇರೆ ಬೇರೆಯಾಗಿ ಮಾಡುತ್ತಾ ಬಂದಿದ್ದೇವೆ ಎಂದರೆ ಸರಿ. 1 ನೇ ಪ್ರತಿವಾದಿಯ ಗಂಡ ಮತ್ತು 2 ನೇ ಪ್ರತಿವಾದಿ ಪ್ರತ್ಯೇಕವಾಗಿ ವಾಸವಿದ್ದಾರೆ ಎಂದರೆ ಸರಿ. ನಿಂಗಪ್ಪ ಮತ್ತು ನನ್ನ ತಂದೆ ಗಂಗಾಧರಪ್ಪರವರ ಹೆಣ್ಣು ಮಕ್ಕಳು ವಿವಾಹ ಆದಾಗಿನಿಂದ ಅವರವರ ಗಂಡಂದಿರರ ಮನೆಗಳಲ್ಲಿ ವಾಸವಿದ್ದಾರೆ ಎಂದರೆ ಸರಿ. 7 ನೇ ಪ್ರತಿವಾದಿ ನಮ್ಮೊಂದಿಗೆ ಪ್ರಕರಣ ದಾಖಲಿಸಲು ಬರಲು ಒಪ್ಪದೇ ಇದ್ದ ಕಾರಣ ಪ್ರತಿವಾದಿಯನ್ನಾಗಿ ಮಾಡಿದ್ದೇವೆ. 7 ನೇ ಪ್ರತಿವಾದಿ ನನ್ನ ಅಣ್ಣ ಮತ್ತು ಅವರಿಗೆ ದಾವಾ ಆಸ್ತಿಗಳ ಬಗ್ಗೆ ನನ್ನ ತಂದೆ ಗಂಗಾಧರಪ್ಪ ಮತ್ತು ದೊಡಪ್ಪ ನಿಂಗಪ್ಪರವರ ಮಧ್ಯೆ ನಡೆದ ವ್ಯವಹಾರಾಗಳ ಬಗ್ಗೆ ಮಾಹಿತಿ ಇದೆ ಎಂದರೆ ಇರಬಹುದು. ನಿಂಗಪ್ಪ ವಾಸವಿದ್ದ ಮನೆಯನ್ನು ನಿಂಗಪ್ಪರವರ ಮಕ್ಕಳು ಸುಮಾರು 30 ವರ್ಷಗಳ ಹಿಂದೆ ಮಾರಾಟ ಮಾಡಿದ್ದಾರೆ. ನಾನು ನನ್ನ ತಂದೆ ಗಂಗಾಧರಪ್ಪ ಕಟ್ಟಿಸಿದ್ದ ಮನೆಯಲ್ಲಿ ಹುಟ್ಟಿ ಬೆಳೆದಿದ್ದು ಮತ್ತು ಪ್ರಸ್ತುತ ನಾನು ನಿರ್ಮಿಸಿದ್ದ ಮನೆಯಲ್ಲಿ ವಾಸವಿದ್ದೇನೆ.

ನನ್ನ ತಂದೆ ಗಂಗಾಧರಪ್ಪರವರ ಎಲ್ಲಾ ಮಕ್ಕಳು ಪ್ರತ್ಯೇಕವಾಗಿ ವಾಸವಿದ್ದು ಮತ್ತು ಎಲ್ಲರೂ ವ್ಯವಸಾಯದ ಆದಾಯ ಹೊಂದಿದ್ದೇವೆ ಎಂದರೆ ಸರಿ. ನನ್ನ ತಂದೆ ಗಂಗಾಧರಪ್ಪ ಮತ್ತು ದೊಡಪ್ಪ ನಿಂಗಪ್ಪ ರವರು ವಾಸವಿದ್ದ ಕಾಲಕ್ಕೆ ಅವರ ಮನೆತನಕ್ಕೆ ಇದ್ದ ಆಸ್ತಿಗಳ ವಿವರ ನನಗೆ ಗೊತ್ತಿಲ್ಲ. ಪ್ರಕರಣ ದಾಖಲಿಸುವ ಕಾಲಕ್ಕೆ ಗಂಗಾಧರಪ್ಪ ಮತ್ತು ನಿಂಗಪ್ಪ ರವರ ಹೆಸರಿಗೆ ಇದ್ದ ದಾಖಲೆಗಳನ್ನು ನಾನು ನೋಡಿಲ್ಲ. ಪ್ರತಿವಾದಿಗಳು ಸಲ್ಲಿಸಿದ್ದ ಪ್ರತಿವಾದ ಪತ್ರದ ಸಂಗತಿಗಳನ್ನು ಕೇಳಿ ತಿಳಿದುಕೊಂಡಿದ್ದೇನೆ. ನನ್ನ ತಂದೆ ಜೀವಂತ ಇದ್ದಾಗ ನನ್ನ ದೊಡ್ಡಪ್ಪ ನಿಂಗಪ್ಪರವರಿಗೆ ಕುಟುಂಬದ ಆಸ್ತಿಗಳಲ್ಲಿ ಭಾಗ ನೀಡಬೇಕು ಎಂದು ಕೇಳಿದ್ದ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ದೊಡ್ಡಪ್ಪ ನಿಂಗಪ್ಪರವರು ಜೀವಂತ ಇದ್ದಾಗೆ ನನ್ನ ತಾಯಿ ಯೋಗಮ್ಮರವರು ಕುಟುಂಬದ ಆಸ್ತಿಗಳಲ್ಲಿ ಭಾಗ ನೀಡಬೇಕು ಎಂದು ಕೇಳಿದ್ದರು ಆದರೆ ನಿಂಗಪ್ಪರವರು ಭಾಗ ನೀಡಿರಲಿಲ್ಲ ಮತ್ತು ಅದಕ್ಕೆ ಒಪ್ಪಿರಲಿಲ್ಲ. ಹಾಗೆ ಭಾಗ ನೀಡಲು ನಿರಾಕರಿಸಿದಾಗೆ ನಿಂಗಪ್ಪ ಜೀವಂತ ಇದ್ದಾಗ ನನ್ನ ತಾಯಿ ಕುಟುಂಬದ ಆಸ್ತಿಗಳಲ್ಲಿ ಭಾಗ ಪಡೆಯಲು ಯಾವುದೇ ಕ್ರಮ ಕೈಗೊಂಡಿಲ್ಲ.

ನನ್ನ ತಂದೆ ಗಂಗಾಧರಪ್ಪ ಮತ್ತು ದೊಡ್ಡಪ್ಪ ನಿಂಗಪ್ಪರವರು ನನ್ನ ಮಾಹಿತಿಯ ಪ್ರಕಾರ ಪ್ರತ್ಯೇಕವಾಗಿ ಬೇರೆ ಬೇರೆ ಮನೆಗಳಲ್ಲಿ ವಾಸವಿದ್ದರು. ನನ್ನ ತಂದೆ ಗಂಗಾಧರಪ್ಪರವರು ಪ್ರತ್ಯೇಕವಾಗಿ ವಾಸವಿದ್ದ ಕಾಲಕ್ಕೆ ಬಿಲ್ಲಹಳ್ಳಿ ಗ್ರಾಮದ ಸರ್ವೆ ನಂ 9 ರಲ್ಲಿ 03 ಎಕರೆ 04 ಗುಂಟೆ ಜಮೀನು ಪ್ರತ್ಯೇಕವಾಗಿ ಅನುಭವಿಸುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಸದರಿ ಸರ್ವೆ ನಂ 9 ರ ಆಸ್ತಿಯನ್ನು ತಮ್ಮ ಜೀವಿತಾವಧಿಯಲ್ಲಿ ಮೂರ್ತಪ್ಪರವರಿಂದ ಸಾಲ ಪಡೆದು ಆಧಾರವಾಗಿ ನೀಡಿದ್ದರು ಎಂದರೆ ಸರಿಯಲ್ಲ. ಸದರಿ ಸಾಲ ತೀರುವಳಿ ಮಾಡದೇ ಇದ್ದ ಕಾರಣ ನನ್ನ ತಂದೆ ಸರ್ವೆ ನಂ 9 ರ 03 ಎಕರೆ 04 ಗುಂಟೆ ಆಸ್ತಿಯ ಪೈಕಿ 1969 ರಲ್ಲಿ 1 ಎಕರೆ 20 ಗುಂಟೆ ಜಮೀನು ಆಸ್ತಿಯನ್ನು ಉಳಿದ 1 ಎಕರೆ 24 ಗುಂಟೆ ಜಮೀನು ಆಸ್ತಿಯನ್ನು 1973 ರಲ್ಲಿ ಪ್ರತ್ಯೇಕವಾಗಿ ಎರಡು ಕ್ರಯಪತ್ರಗಳನ್ನು ಬ ರೆದುಕೊಡುವುದರ ಮೂಲಕ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ಹಾಗೆ ಮಾರಾಟ ಮಾಡುವ ಕಾಲಕ್ಕೆ ಜಂಟಿಯಾಗಿ ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ. 1969 ಮತ್ತು 1973 ರಲ್ಲಿ ನನ್ನ ತಂದೆ ಗಂಗಾಧರಪ್ಪ ಮತ್ತು ಸಹೋದರ ನಿಂಗಪ್ಪರವರು ಪ್ರತ್ಯೇಕವಾಗಿ ವಾಸವಿದ್ದರು ಎಂದರೆ ಸರಿಯಲ್ಲ. 1969 ಮತ್ತು 1973 ರಲ್ಲಿ ಕುಟುಂಬದ ಆಸ್ತಿಗಳನ್ನು ನನ್ನ ತಂದೆ ಗಂಗಾಧರಪ್ಪ ಮತ್ತು ದೊಡ್ಡಪ್ಪ ನಿಂಗಪ್ಪರವರು ಮೌಖಿಕವಾಗಿ ವಿಭಾಗಿಸಿಕೊಂಡಿದ್ದರು ಸಹ ನನ್ನ ದೊಡ್ಡಪ್ಪ

ನಿಂಗಪ್ಪರವರ ಹೆಸರಿನಲ್ಲಿ ಇದ್ದ ಕಾರಣ ಸದರಿ ಎರಡು ಕ್ರಯಪತ್ರಗಳನ್ನು ಮೂರ್ತಪ್ಪರವರ ಹೆಸರಿಗೆ ನನ್ನ ತಂದೆ ಗಂಗಾಧರಪ್ಪ ಮತ್ತು ದೊಡ್ಡಪ್ಪ ನಿಂಗಪ್ಪರವರು ಜಂಟಿಯಾಗಿ ಬರೆದುಕೊಟ್ಟಿದ್ದರು ಎಂದರೆ ಸರಿಯಲ್ಲ.

1969 ಕ್ಕೂ ಮುಂಚೆಯೆ ನನ್ನ ತಂದೆ ಮತ್ತು ನನ್ನ ದೊಡ್ಡಪ್ಪ ಗಂಗಾಧರಪ್ಪ ಮತ್ತು ನಿಂಗಪ್ಪರವರು ಕುಟುಂಬದ ಆಸ್ತಿಗಳನ್ನು ಮೌಖಿಕವಾಗಿ ವಿಭಾಗಿಸಿಕೊಂಡಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಗಂಗಾಧರಪ್ಪ ಮತ್ತು ದೊಡ್ಡಪ್ಪ ನಿಂಗಪ್ಪರವರ ಮಧ್ಯೆ ಆದ ಮೌಖಿಕ ವಿಭಾಗದಲ್ಲಿ ತರೀಕೆರೆ ತಾಲ್ಲುಕು ಬಿಲ್ಲಹನಳ್ಳಿ ಗ್ರಾಮದ ಸರ್ವೆ ನಂ 9 ರಲ್ಲಿ 3 ಎಕರೆ 04 ಗುಂಟೆ ಜಮೀನು ಮತ್ತು ದುರ್ವಿಗೆರೆ ಗ್ರಾಮದ ಸರ್ವೆ ನಂ 145 ರಲ್ಲಿ 1 ಎಕರೆ 37 ಗುಂಟೆ ಜಮೀನು ನನ್ನ ತಂದೆ ಗಂಗಾಧರಪ್ಪರವರ ಆಸ್ತಿಗಳು ಬಂದಿದ್ದವು ಎಂದರೆ ಸರಿಯಲ್ಲ. ಸದರಿ ವಿಭಾಗದಲ್ಲಿ ನನ್ನ ದೊಡ್ಡಪ್ಪ ನಿಂಗಪ್ಪರವರಿಗೆ ಈ ಪ್ರಕರಣದ ಕ್ರಮ ಸಂಖ್ಯೆ 2 ರಿಂದ 4 ಮತ್ತು 8 ರ ದಾವಾ ಅನುಸೂಚಿ ಆಸ್ತಿಗಳು ಭಾಗಕ್ಕೆ ಬಂದಿದ್ದವು ಎಂದರೆ ಸರಿಯಲ್ಲ. ನನ್ನ ತಂದೆ ಮರಣ ಹೊಂದುವ ಕಾಲಕ್ಕೆ ಅವರು ಸರ್ವೆ ನಂ 145 ರಲ್ಲಿ 1 ಎಕರೆ 37 ಗುಂಟೆ ಜಮೀನು ಆಸ್ತಿಯ ಸ್ವಾಧೀನ ಮಾತ್ರ ಹೊಂದಿದ್ದು ಉಳಿದ ಯಾವುದೇ ಆಸ್ತಿಗಳ ಸ್ವಾಧೀನ ಹೊಂದಿಲ್ಲ ಎಂದರೆ ಸರಿ. ನನ್ನ ತಂದೆಯ ಮರಣ ನಂತರ ನಾನು ಮತ್ತು ಸಹೋದರರು ಸರ್ವೆ ನಂ 145 ರಲ್ಲಿ 1 ಎಕರೆ 37 ಗುಂಟೆ ಜಮೀನು ಆಸ್ತಿಯನ್ನು ವಿಭಾಗಿಸಿಕೊಂಡು ಪ್ರತ್ಯೇಕ ಸಾಗುವಳಿ ಮಾಡುತ್ತಿದ್ದೇವೆ ಎಂದರೆ ಸಾಕ್ಷಿ ತಾವು ವಿಭಾಗ ಮಾಡಿಲ್ಲ ಬದಲಾಗಿ ತನ್ನ ತಂದೆಯೇ ವಿಭಾಗಿಸಿ ನೀಡಿದ್ದಾರೆ ಎಂದು ನುಡಿಯುತ್ತಾರೆ. ನನ್ನ ತಂದೆ ಸರ್ವೆ ನಂ 145 ರಲ್ಲಿ 1 ಎಕರೆ 37 ಗುಂಟೆ ಜಮೀನು ಆಸ್ತಿಯಲ್ಲಿ ನನಗೆ ಮತ್ತು ನನ್ನ ಸಹೋದರರಿಗೆ ತಲಾ 25 ಗುಂಟೆ ಜಮೀನು ಆಸ್ತಿಯನ್ನು ಭಾಗ ಮಾಡಿ ನೀಡಿದ್ದರು. ನನ್ನ ಮತ್ತು ನನ್ನ ಸಹೋದರರ ಜಮೀನು ಆಸ್ತಿ ಸಾಗುವಳಿ ಅನುಭವದ ಪ್ರಕಾರ ಪಹಣಿ ಪತ್ರಿಕೆಗಳು ನಮ್ಮ ನಮ್ಮ ಹೆಸರಿಗೆ ಇವೆ ಎಂದರೆ ಸರಿ.

ದಾವಾ ಕ್ರಮ ಸಂಖ್ಯೆ 5 ರ ಅನುಸೂಚಿ ಆಸ್ತಿಯ ಅನುಭವದ ಆಧಾರದ ಮೇಲೆ ನನ್ನ ಅಣ್ಣ 7 ನೇ ಪ್ರತಿವಾದಿ ಹೆಸರಿಗೆ ಪಹಣಿ ಪತ್ರಿಕೆ ದಾಖಲಾಗಿದೆ ಎಂದರೆ ಸರಿ. ಅದೇ ಪ್ರಕಾರ ದಾವಾ ಕ್ರಮ ಸಂಖ್ಯೆ 6 ರ ಅನುಸೂಚಿ ಆಸ್ತಿಯ ಅನುಭವದ ಆಧಾರದ ಮೇಲೆ ನನ್ನ ಹೆಸರಿಗೆ ಪಹಣಿ ಪತ್ರಿಕೆ ದಾಖಲಾಗಿದೆ ಎಂದರೆ ಸರಿ. ಅದೇ ಪ್ರಕಾರ ದಾವಾ ಕ್ರಮ ಸಂಖ್ಯೆ 7 ರ ಅನುಸೂಚಿ ಆಸ್ತಿಯ ಅನುಭವದ ಆಧಾರದ ಮೇಲೆ ನನ್ನ ಅಣ್ಣ 4 ನೇ ವಾದಿ ಹೆಸರಿಗೆ ಪಹಣಿ ಪತ್ರಿಕೆ ದಾಖಲಾಗಿದೆ ಎಂದರೆ ಸರಿ. ನನ್ನ ತಂದೆಯ ಮರಣ

ನಂತರ ನಾನು ಮತುತ ನನ್ನ ಸಹೋದರರು ದಾವಾ ಕ್ರಮ ಸಂಖ್ಯೆ 5 ರಿಂದ 7 ರ ಆಸ್ತಿಗಳನ್ನು ನಮ್ಮ ನಮ್ಮ ಅನುಭವ ಹಕ್ಕಿನಿಂದ ಅನುಭವಿಸುತ್ತಿದ್ದೇವೆ ಎಂದರೆ ಸರಿ.

ದಾವಾ ಕ್ರಮ ಸಂಖ್ಯೆ 2 ರಿಂದ 4 ಮತ್ತು 8 ರ ಅನುಸೂಚಿ ಆಸ್ತಿಗಳನ್ನು ನನ್ನ ದೊಡ್ಡಪ್ಪ ನಿಂಗಪ್ಪರವರ ಮಕ್ಕಳು ಸ್ವಂತ ಹಕ್ಕಿನಿಂದ ಅನುಭವಿಸುತ್ತಾ ಬಂದಿದ್ದಾರೆ ಎಂದರೆ ಸರಿ. ದಾವಾ ಕ್ರಮ ಸಂಖ್ಯೆ 9 ರ ಅನುಸೂಚಿ ಆಸ್ತಿಯು ನಿಪಿ 10 ರ ಪ್ರಕಾರ 1 ನೇ ಪ್ರತಿವಾದಿ ಹೆಸರಿಗೆ ಇದ್ದು ಅದಕ್ಕೂ ಮುಂಚೆ ಯಾರ ಹೆಸರಿಗೆ ಸದರಿ ಆಸ್ತಿ ಇತ್ತು ಎಂದು ನನಗೆ ಗೊತ್ತಿಲ್ಲ. ದಾವಾ ಕ್ರಮ ಸಂಖ್ಯೆ 9 ರ ಅನುಸೂಚಿ ಆಸ್ತಿಯು ನನ್ನ ಅಜ್ಜನ ಹೆಸರಿಗೆ ಇತ್ತಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯ ತವರುಮನೆ ಊರು ಬೆಳ್ಳಿಗನೂರು ಗ್ರಾಮ. 1 ನೇ ಪ್ರತಿವಾದಿಯ ತಂದೆ ಮಲ್ಲಪ್ಪ. ದಾವಾ ಕ್ರಮ ಸಂಖ್ಯೆ 9 ರ ಅನುಸೂಚಿ ಆಸ್ತಿಯು 1 ನೇ ಪ್ರತಿವಾದಿಯ ತಾಯಿ ನಾಗಮ್ಮ ಗಂಡ ಮಲ್ಲಪ್ಪರವರ ಹೆಸರಿಗೆ ಇತ್ತು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ತಾಯಿ ನಾಗಮ್ಮ ರವರು 1 ನೇ ಪ್ರತಿವಾದಿಯ ಹೆಸರಿಗೆ 1999 ರಲ್ಲಿ ದಾವಾ ಕ್ರಮ ಸಂಖ್ಯೆ 9 ರ ಅನುಸೂಚಿ ಆಸ್ತಿಯನ್ನು ದಾನ ಪತ್ರ ಬರೆದುಕೊಟ್ಟ ಆಧಾರದ ಮೇಲೆ ನಿಪಿ 10 ರಂತೆ 1 ನೇ ಪ್ರತಿವಾದಿಯ ಹೆಸರಿಗೆ ಸದರಿ ಆಸ್ತಿ ದಾಖಲಾಗಿದೆ ಎಂದರೆ ಸರಿ. 1999 ರಿಂದ ಇಲ್ಲಿಯವರೆಗೆ ದಾವಾ ಕ್ರಮ ಸಂಖ್ಯೆ 9 ರ ಅನುಸೂಚಿ ಆಸ್ತಿಯು 1 ನೇ ಪ್ರತಿವಾದಿಯ ಹಕ್ಕು ಮತ್ತು ಅನುಭವದಲ್ಲಿ ಇದೆ ಎಂದರೆ ಸರಿ. ದಾವಾ ಕ್ರಮ ಸಂಖ್ಯೆ 9 ರ ಅನುಸೂಚಿ ಆಸ್ತಿಯು 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿದಯಾಗಿದ್ದ ಕಾರಣ ಸದರಿ ಆಸ್ತಿಯಲ್ಲಿ 1 ನೇ ಪ್ರತಿವಾದಿಯನ್ನು ಹೊರತುಪಡಿಸಿ ಮತ್ತು ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿ.

ಶ್ರೀ ಎಂ ಟಿ ಎಸ್ ವಕೀಲರ ಕೋರಿಕೆ ಮೇರೆಗೆ ಮುಂದುವರಿದ ಪಾಟೀ ಸವಾಲಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.